# ಲಜ್ಜಾಪಟಾವೃತೆ

**ಮೀನಾ**

**ಶ್ರೀಮಾತೆ ಶಾರದಾದೇವಿಯವರ ಲಜ್ಜಾ ಸ್ವಭಾವಕ್ಕೆ ವಿಶಾಲಾರ್ಥವನ್ನು ನೀಡಿ ಅದರ ಮೇಲೆ ಹೊಸ ಬೆಳಕನ್ನು ಚೆಲ್ಲಿದ್ದಾರೆ ಶ್ರೀಮತಿ ಮೀನಾ ಅವರು. ಬೆಂಗಳೂರಿನವರಾದ ಅವರು ತತ್ತ್ವಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರು.**



ಸ್ವಾಮಿ ಅಭೇದಾನಂದರು ತಮ್ಮ ಶ್ರೀ ಶಾರದಾದೇವಿ ಸ್ತೋತ್ರದಲ್ಲಿ ಶ್ರೀಮಾತೆ ಶಾರದಾದೇವಿಯರನ್ನು 'ಲಜ್ಜಾಪಟಾವೃತೇ' ಎಂದು ಕರೆದಿದ್ದಾರೆ. ಲಜ್ಜೆಯೆಂಬ ಆವರಣವನ್ನು ಉಳ್ಳವರು ಅಥವಾ ಲಜ್ಜೆಯೇ ಆಭರಣವಾಗಿ ಉಳ್ಳವರು ಶ್ರೀಶಾರದಾದೇವಿಯವರು. ಅವರ ಭಾವಚಿತ್ರಗಳಲ್ಲಿ ನಾವು ಅವರು ತಮ್ಮ ಸೆರಗನ್ನು ಪೂರ್ತಿಯಾಗಿ ಹೊದ್ದಿರುವುದನ್ನು ಕಾಣುತ್ತೇವೆ. ಅಂತೆಯೇ ಲಜ್ಜೆ ಎಂಬ ಆವರಣದಿಂದ ತಮ್ಮನ್ನು ಮರೆಮಾಚಿಕೊಂಡಿರುವ ಅವರ ನಿಜಸ್ವರೂಪವನ್ನು ಅರಿಯುವುದು ಬಹುತಪಸ್ಸಿನವರಿಗೆ ಮಾತ್ರ ಸಾಧ್ಯ.

ಶ್ರೀರಾಮಕೃಷ್ಣರು ಒಮ್ಮೆ ಹೇಳುತ್ತಾರೆ : 'ಅವರು ಸಾರದೆ, ಸರಸ್ವತಿ. ಜ್ಞಾನವನ್ನು ದಯಪಾಲಿಸುವುದಕ್ಕಾಗಿ ಬಂದಿದ್ದಾರೆ. ಆದರೆ ರೂಪವನ್ನು ಮರೆಸಿ ಬಂದಿದ್ದಾರೆ. ಬೆಕ್ಕು ಬೂದಿಯನ್ನು ಬಳಿದು ಕುಳಿತಿರುವಂತೆ.' ಇದು ಅಕ್ಷರಶಃ ಸತ್ಯ. ಅವರು ಮೊದಲಿನಿಂದ ಕೊನೆಯವರೆಗೂ ಅವಗುಂಠನವತಿಯಾಗಿಯೇ ಇದ್ದರು. ಅವರ ಕೃಪೆಯಿಲ್ಲದೆ ಅವರನ್ನು ಅರಿಯುವಂತೆಯೇ ಇಲ್ಲ.

ಜಯರಾಮ್‌ಬಾಟಿಯಲ್ಲಿ ಅವರ ದಿವ್ಯ ಜೀವನ ಪ್ರಾರಂಭ. ಆ ಹಳ್ಳಿಯಂತೆಯೇ ಅವರ ಜೀವನವೂ ನೀರವ, ತೆರೆಯ ಮರೆಯಿದ್ದಂತೆ. ದಕ್ಷಿಣೇಶ್ವರಕ್ಕೆ ಬಂದು ತಮ್ಮ ದೇವಸದೃಶರಾದ ಪತಿಯೊಂದಿಗೆ ಇದ್ದಾಗಲೂ ಅಷ್ಟೇ. ಯಾರಿಗೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಬಹಳ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿ ಬಂದರೂ ಬಹು ನಿಃಶಬ್ದವಾಗಿ ಮಾಡುತ್ತಿದ್ದರು. ಒಮ್ಮೆ ದಕ್ಷಿಣೇಶ್ವರದ ಖಜಾಂಚಿ ಹೇಳಿದನಂತೆ : 'ಅವರು (ಶ್ರೀ ಶಾರದಾದೇವಿಯವರು) ಇಲ್ಲಿದ್ದಾರೆಂದು ಕೇಳಿರುವೆ. ಆದರೆ ಎಂದೂ ನೋಡಿದವನಲ್ಲ' ಎಂದು.

## ಶೀಲ ಮತ್ತು ಲಜ್ಜೆ

ಈ ದಿವ್ಯಗುಣವಾದ 'ಲಜ್ಜೆ'ಯೆಂದರೆ ಏನು? ಲಜ್ಜೆಯೆಂದರೆ ಶೀಲವೆಂದೇ ಹೇಳಬಹುದು. ಶೀಲವು ಪೂರ್ಣಾವಸ್ಥೆಯನ್ನು ಮುಟ್ಟಿದಾಗ ಲಜ್ಜೆ ಸ್ವಾಭಾವಿಕವಾಗುವುದು. ರಾಮಾಯಣದಲ್ಲಿ ಒಂದು ಘಟನೆ ಬರುತ್ತದೆ : ಯುದ್ಧವೆಲ್ಲಾ ಮುಗಿದ ಬಳಿಕ ಸೀತಾದೇವಿಯನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಕರೆದುತರುವೆನೆಂದು ವಿಭೀಷಣ ಹೇಳಿದಾಗ ಶ್ರೀರಾಮ, 'ಏನೂ ಬೇಕಾಗಿಲ್ಲ. ಆಕೆ ಎಲ್ಲರೆದುರಿಗೇ ನಡೆದು ಬರಲಿ. ಶೀಲವೇ ಸ್ತ್ರೀಯರ ಆವರಣ, ಲಜ್ಜೆ' ಎನ್ನುತ್ತಾನೆ. ಇನ್ನು ಭಗವಾನ್ ಶ್ರೀಕೃಷ್ಣ ಗೀತೆಯಲ್ಲಿ ಅರ್ಜುನನಿಗೆ, 'ಸಂಭಾವಿತಸ್ಯ ಚಾಕೀರ್ತಿರ್ಮರಣಾದತಿರಿಚ್ಯತೇ' ಎಂದು ಹೇಳುತ್ತಾನೆ. ಎಂದರೆ ಸಂಭಾವಿತನಾದವನಿಗೆ ಅಕೀರ್ತಿ ಮರಣಕ್ಕಿಂತ ಹೆಚ್ಚಿನದು. ಅಕೀರ್ತಿ ಉಂಟಾಗುವುದು ಕೆಟ್ಟ ಕರ್ಮಗಳಿಂದಾಗಿ. ಕೆಟ್ಟ ಕರ್ಮಗಳನ್ನು ಮಾಡುವುದಕ್ಕೆ ಹೆದರುವುದೇ ಲಜ್ಜೆ. ಆದ್ದರಿಂದ ಲಜ್ಜೆಯಿಂದ ಒಡಗೂಡಿದ ಮಹನೀಯರು ಸದಾ ಒಳ್ಳೆಯ ಕಾರ್ಯಗಳನ್ನು ಮಾಡುವುದರಲ್ಲೇ ಪ್ರವೃತ್ತರಾಗಿರುತ್ತಾರೆ. ಉದಾಹರಣೆಗೆ ರಾವಣನಿಂದ ಅಪಹೃತಳಾಗಿ, ಅನೇಕ ಕಷ್ಟಪರಂಪರೆ ಹಾಗೂ ಪ್ರಲೋಭನೆಗಳನ್ನು ಎದುರಿಸಿ ತನ್ನ ಶುದ್ಧಚಾರಿತ್ರ್ಯವನ್ನು ಕಾಪಾಡಿಕೊಳ್ಳಲು ಒಮ್ಮೆ ಅಗ್ನಿಪ್ರವೇಶ ಮಾಡಿ, ಮತ್ತೊಮ್ಮೆ ಭೂಮಿಯಲ್ಲಿ ಅಡಗಿಹೋದ ಸೀತೆಯ ಆಚರಣೆಯಲ್ಲಿ ಯಾವ ಪ್ರೇರಣೆಯಿದೆಯೋ ಅದು ಲಜ್ಜೆ.

## ಲಜ್ಜೆ ಮತ್ತು ಆದರ್ಶನಿಷ್ಠೆ

ಶ್ರೀಕೃಷ್ಣಪರಮಾತ್ಮನಲ್ಲಿ ಮನೋವಾಕ್ಕಾಯ ಭಕ್ತಿಯನ್ನು ಮಾಡಿ—ಕಡೆಗೆ ಆಜೀವನವೂ ಆತನಿಂದ ದೂರವಿರಬೇಕಾದ ಸಮಯದಲ್ಲೂ, ಆತನ ಸ್ಮರಣ, ಮನನ, ನಿದಿಧ್ಯಾಸನದಿಂದ ಸದಾ ಮಹಾಭಾವಮಗ್ನಳಾದ ಶ್ರೀಮತಿ ರಾಧೆಯ ಆಚರಣೆ ಲಜ್ಜೆಯಿಂದ ಕೂಡಿದ್ದು. ಹುಟ್ಟು ರಾಜಕುಮಾರಿಯಾದರೂ ಜೀವನದುದ್ದಕ್ಕೂ ಕಷ್ಟಪರಂಪರೆ ಅನುಭವಿಸಿ, ತನ್ನ ಐವರು ಪುತ್ರರನ್ನೂ ಸತ್‌ಚಾರಿತ್ರರನ್ನಾಗಿ ಮಾಡಿ, ತಾನು ಕೇವಲ ತಪಸ್ವಿನಿಯಂತೆ ಬಾಳಿದ ಶ್ರೀಕುಂತೀಮಾತೆಯ ಜೀವನ ಲಜ್ಜೆಯಿಂದ ಭೂಷಿತವಾಗಿದೆ. ತನ್ನ ಅತ್ಯಂತ ಶ್ರೇಷ್ಠ ಹಾಗೂ ವಿದ್ಯಾವಾರಿಧ

ಯಾವ ಮಗನ ಸಂನ್ಯಾಸಕ್ಕೆ ಒಪ್ಪಿ ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ಸಹಿಸಿ ಆತನ ಮಹಾಸಮಾಧಿಯನ್ನೂ ವೀಕ್ಷಿಸಿದ ಸ್ವಾಮಿ ವಿವೇಕಾನಂದರ ಮಾತೆಯಾದ ಶ್ರೀಭುವನೇಶ್ವರೀ ದೇವಿಯ ದಿಟ್ಟತನ ಲಜ್ಜಾನ್ವಿತವಾದುದು. ಕೈಕೇಯಿಯ ಲೋಭದಿಂದ ತನಗಾಗಿ ಬಂದ ರಾಜ್ಯವನ್ನು ಒಲ್ಲೆನೆಂದು, ರಾಮನೊಬ್ಬನೆ ನಿಧಿಯೆಂದೆಣಿಸಿ, ಆತನಿಗಾಗಿಯೇ ಎಲ್ಲವನ್ನೂ ತ್ಯಾಗ ಮಾಡಿದ, ಆತನ ಆಣತಿಯಂತೆ 'ಶ್ರೀರಾಮಪಾದುಕಾಪಟ್ಟಾಭಿಷೇಕ' ಮಾಡಿ ರಾಜ್ಯವಾಳಿದ ಶ್ರೀ ಭರತನ ಮಹಿಮೆ ಲಜ್ಜೆಯೆನಿಸುವುದು. ತನ್ನ ತಂದೆಯನ್ನು ಆನಂದ ಲೋಕಗಳಿಗೆ ಹೋಗದಂತೆ ತಡೆದು ತನ್ನನ್ನೇ ಮೃತ್ಯುವಿಗೆ ಕೊಡುವಂತೆ ತಂದೆಯಿಂದ ಹೇಳಿಸಿ, ಶ್ರದ್ಧೆಯಿಂದ ಆವೃತವಾದ ಬಾಲಕ ನಚಿಕೇತನ ಬುದ್ಧಿ ಲಜ್ಜೆಯಿಂದ ತುಂಬಿದೆ. ತಾವೊಬ್ಬರೇ ನಿರ್ವಿಕಲ್ಪ ಸಮಾಧಿಯ ಸುಖವನ್ನು ಸದಾ ಅನುಭವಿಸುವುದನ್ನು ಬಿಟ್ಟು, ತನ್ನ ದೇಶದ ಜನ ಹುಳ ಹುಪ್ಪಟೆಗಿಂತ ಕಡೆಯಾಗಿಯಿರುವುದನ್ನು ಕಂಡು ಅವರನ್ನು ಶಾರೀರಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಸಂಪನ್ನರನ್ನಾಗಿ ಮಾಡಲು ಪಣತೊಟ್ಟ ಸ್ವಾಮಿ ವಿವೇಕಾನಂದರ ಧೀರತನ ಲಜ್ಜೆಯೆನಿಸುತ್ತದೆ.

ಒಂದು ಆದರ್ಶವನ್ನು ಇಟ್ಟುಕೊಂಡು ಅದಕ್ಕೆ ಬದ್ಧನಾಗಿಲ್ಲದ್ದರೆ ಆತ್ಮಗೌರವಕ್ಕೆ ಕ್ಷತಿಯುಂಟಾಗುತ್ತದೆ, ತನ್ನ ಬಗ್ಗೆಯೇ ಕೀಳರಿಮೆಯುಂಟಾಗುತ್ತದೆ. ನಿಜವಾದ ಲಜ್ಜಾಸ್ವಭಾವವುಳ್ಳವನು ಇದನ್ನು ಸಹಿಸಲಾರ. ಆದ್ದರಿಂದ ಆದರ್ಶನಿಷ್ಠೆಯೂ ಲಜ್ಜೆಯ ಒಂದು ಲಕ್ಷಣ.

## ನಡೆನುಡಿಯಲ್ಲಿ ಲಜ್ಜೆ

ಶ್ರೀಮಾತೆ ಶಾರದಾದೇವಿಯವರು ತಮ್ಮ ದಿವ್ಯ ಜೀವನದಲ್ಲಿ ಲಜ್ಜೆ ಎಂದರೇನು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಅದನ್ನು ಸ್ವಲ್ಪ ನೋಡೋಣ. ಶ್ರೀರಾಮಕೃಷ್ಣ ಕಥಾಮೃತದ ಕರ್ತೃವಾದ ಶ್ರೀ ಮಹೇಂದ್ರನಾಥ ಗುಪ್ತರು ಶ್ರೀರಾಮಕೃಷ್ಣರ ಬಳಿ ಬಂದು ನಾಲ್ಕು ವರ್ಷವಾದರೂ ಶ್ರೀಮಾತೆಯವರು ಯಾರೆಂದು ಅವರಿಗೆ ತಿಳಿದಿರಲಿಲ್ಲ. ಶ್ರೀರಾಮಕೃಷ್ಣರ ಅನೇಕ ಪ್ರತ್ಯಕ್ಷ ಶಿಷ್ಯರೂ ಸಹ ಅವರನ್ನು ಪೂರ್ಣವಾಗಿ ದರ್ಶನ ಮಾಡಿದ್ದರೊ ಇಲ್ಲವೋ ಸಂಶಯ. ಅವರಲ್ಲಿ ಶ್ರೀಮಾತೆಯವರ ಸೇವಾಭಾಗ್ಯವನ್ನು ಪಡೆದ ಶ್ರೀಮತ್ ಸ್ವಾಮಿ ಶಾರದಾನಂದಜೀಯವರು ಪ್ರಣಾಮ ಮಾಡುವುದಕ್ಕೆ ಹೋದಾಗಲೂ ಸಹ ಶ್ರೀಮಾತೆಯವರು ಅವಗುಂಠನವತಿಯಾಗಿಯೇ ಇರುತ್ತಿದ್ದರು. ವಿವೇಕಾನಂದರು, ಬ್ರಹ್ಮಾನಂದರು ಮುಂತಾದವರೆಲ್ಲಾ ಅವರಿಗೆ ಬಹುದೂರದಿಂದಲೇ ಪ್ರಣಾಮ ಮಾಡುತ್ತಿದ್ದರು. ಅವರು ಯಾರೊಡನೆಯೂ ನೇರವಾಗಿ ಮಾತನಾಡುತ್ತಿರಲಿಲ್ಲ. ಗೋಲಾಪ್ ಮಾ ಅಥವಾ ಇನ್ನ್ಯಾರಾದರೂ ಅವರ ಮಾತನ್ನು ಜೋರಾಗಿ ಹೇಳುತ್ತಿದ್ದರು.

ಬಹಳ ಕಾಲ ಶ್ರೀರಾಮಕೃಷ್ಣರ ಎದುರಿಗೇ ತಲೆಗೆ ಪೂರ್ತಿ ಸೆರಗು ಹಾಕಿಕೊಳ್ಳುತ್ತಿದ್ದರು. ದಕ್ಷಿಣೇಶ್ವರದಲ್ಲೇ ಇದ್ದರೂ ಅನೇಕ ತಿಂಗಳಾದರೂ ಅವರು ಶ್ರೀರಾಮಕೃಷ್ಣರ ದರ್ಶನ ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಇದಕ್ಕೆ ಇತರ ಕಾರಣಗಳಿದ್ದರೂ ಅವರ ಲಜ್ಜೆಯೂ ಮುಖ್ಯ ಕಾರಣವಾಗಿತ್ತು.

ಅವರು ಏಕಾಂಗಿಯಾಗಿ ಎಲ್ಲೂ ಹೋಗುತ್ತಿರಲಿಲ್ಲ. ಗೋಲಾಪ್ ಮಾ ಸದಾ ಅವರ ಜೊತೆಯಲ್ಲಿ ಇರಬೇಕಾಗಿತ್ತು. ಗೋಲಾಪ್‌ಮಾ ಎಲ್ಲಿಯಾದರೂ ಬರಲಿಲ್ಲ ಎಂದರೆ ಶ್ರೀಮಾತೆಯವರು 'ಗೋಲಾಪ್ ಇಲ್ಲದೆ ನಾನೆಲ್ಲಿಯೂ ಹೋಗುವುದಿಲ್ಲ' ಎನ್ನುತ್ತಿದ್ದರು. ಗೋಲಾಪ್‌ಮಾ ಸೆರಗು ಹಿಡಿದು ನವವಧುವಿನಂತೆ ಅವರ ಹಿಂದೆ ಬರುತ್ತಿದ್ದರು. ಇದು ಅವರ ಲಜ್ಜೆಯ ಸ್ವಭಾವಕ್ಕೆ ಒಂದು ಉದಾಹರಣೆ ಎನ್ನಬಹುದು.

ಶ್ರೀಮಾತೆಯವರು ತಮ್ಮ ದಿವ್ಯ ಜೀವನದ ಕೊನೆಯ ಸಮಯದಲ್ಲಿ ಖಾಯಿಲೆಯಿಂದ ನರಳುತ್ತಾ ಮಲಗಿದ್ದಾರೆ. ಅವರ ಶಿಷ್ಯರೊಬ್ಬರು ಪಾದಸೇವೆ ಮಾಡುತ್ತಿದ್ದಾರೆ. ಆಗ ಅವರ ತಲೆಯ ಮೇಲಿನ ಸೆರಗು ಸರಿಯಾಗಿರಲಿಲ್ಲ. ಆ ಸೇವಕರು ಹೊರಟು ಹೋದಮೇಲೆ ಶ್ರೀಮಾತೆಯವರು ಸೇವಕಿಯನ್ನು ಕರೆದು 'ನೀನೇಕೆ ನನ್ನ ತಲೆಗೆ ಸೆರಗು ಹಾಕಿರಲಿಲ್ಲ? ನಾನಾಗಲೇ ಸತ್ತು ಹೋಗಿದ್ದೇನೆಯೇ?' ಎಂದರು. ಅಂತಹ ಸಮಯದಲ್ಲೂ ಅವರು ಲಜ್ಜೆಯನ್ನು ಬಿಡುವುದಕ್ಕೆ ಸಿದ್ಧರಾಗಿರಲಿಲ್ಲ.

ಮಾತಿನಲ್ಲಿ, ಉಡುಪಿನಲ್ಲಿ, ಆಚಾರದಲ್ಲಿ, ಎಲ್ಲದರಲ್ಲೂ ಅವರು ಅತ್ಯಂತ ಲಜ್ಜೆಯಿಂದ ಕೂಡಿದವರಾಗಿದ್ದರು. ಎಂದೂ ದುಡುಕಿ ಮಾತನಾಡುತ್ತಿರಲಿಲ್ಲ. ಅವರು ಸದಾ ತೆರೆಯ ಮರೆಯಲ್ಲೇ ಇರಬಯಸುತ್ತಿದ್ದರು. ಎಲ್ಲದಕ್ಕೂ ಶ್ರೀರಾಮಕೃಷ್ಣರ ಹೆಸರನ್ನೇ ಹೇಳುತ್ತಿದ್ದರು . ತಾವೇ ಸರ್ವಶಕ್ತಿ ಮಯಿಯಾಗಿದ್ದರೂ, ತಾವೇ ದೀಕ್ಷೆಯನ್ನು ದಯಪಾಲಿಸಿ ಕೃಪೆ ಮಾಡಿದರೂ, ಶ್ರೀರಾಮಕೃಷ್ಣರೇ ನಿನ್ನ ಗುರು, ನಿನ್ನ ಸರ್ವಸ್ವ ಎನ್ನುತ್ತಿದ್ದರು. ಯಾರಾದರೂ 'ನೀವೇ ಎಲ್ಲಾ' ಎಂದರೆ 'ಎಂದಿಗೂ ಹಾಗೆ ಭಾವಿಸಬೇಡ, ನಾನು ಕೇವಲ ಅವರ ದಾಸಿಯಾಗಿದ್ದೇನೆ' ಎನ್ನುತ್ತಿದ್ದರು. ಹೀಗೆ ತನ್ನನ್ನು ತಾನು ಮೆರೆಸದೆ ನಮ್ರತೆಯಿಂದಿರುವುದು ಲಜ್ಜೆಯ ಲಕ್ಷಣ. ಇಲ್ಲಿ ನಮ್ರತೆಯೇ ಲಜ್ಜೆ.

## ಲಜ್ಜಾತ್ಯಾಗ

ಶ್ರೀರಾಮಕೃಷ್ಣರು ಹೇಳುತ್ತಾರೆ : ಲಜ್ಜೆ, ಘೃಣ (ತಿರಸ್ಕಾರ ಭಾವ) ಮತ್ತು ಭಯ—ಇವುಗಳನ್ನು ಬಿಡದಿದ್ದರೆ ದೇವರ ಸಾಕ್ಷಾತ್ಕಾರವಾಗುವುದಿಲ್ಲ ಎಂದು. ಇಲ್ಲಿ ಹೇಳಿರುವ ಲಜ್ಜೆಯು ನಮ್ಮ ವ್ಯಾವಹಾರಿಕ ಜೀವನದಲ್ಲಿ ಇರಬೇಕಾದ ಲಜ್ಜೆಗೆ ಸಂಬಂಧಿಸಿದುದಲ್ಲ. ಭಗವಂತನ ಮುಂದೆ ನಾವೆಲ್ಲ ಚಿಕ್ಕ ಮಕ್ಕಳಿದ್ದಂತೆ. ಅಲ್ಲಿ ಲಜ್ಜೆಯ ಪ್ರಶ್ನೆಯೇ ಬರುವುದಿಲ್ಲ. ಒಬ್ಬ ವ್ಯಕ್ತಿಯು ಸಮಾಜದಲ್ಲಿ ತನ್ನ ಸ್ಥಾನಮಾನಗಳಿಗೆ ಆದ್ಯತೆ ಕೊಟ್ಟು ಅಥವಾ ತನ್ನ ಲಿಂಗಭೇದಕ್ಕೆ ಬದ್ಧನಾಗಿ ಇವುಗಳ ಅಭಿಮಾನವನ್ನು ತೊರೆಯಲು ಅಸಮರ್ಥನಾದಾಗ ಅದು ಇಲ್ಲಿ ಲಜ್ಜೆ ಎನಿಸುತ್ತದೆ. ಅಂತಹ ಲಜ್ಜೆ ಭಗವತ್ಸಾಕ್ಷಾತ್ಕಾರಕ್ಕೆ ತಡೆಯಾಗುವುದು ನಿಜ. ಇಂತಹ ಸ್ವಾಭಿಮಾನದಿಂದ ಉಂಟಾಗುವ ಲಜ್ಜೆಯನ್ನು ತ್ಯಜಿಸಬೇಕೆಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ. ಆದರೆ ಇದು ಆಧ್ಯಾತ್ಮಿಕ ವಿಷಯಕ್ಕೆ ಮಾತ್ರ ಅನ್ವಯಿಸುವಂತಹುದು. ವ್ಯಾವಹಾರಿಕ ಜೀವನದಲ್ಲಿ ಸ್ವಾಭಿಮಾನ– ದುರಭಿಮಾನವಲ್ಲ– ಇರಬೇಕು. ಇದು ನಮ್ಮನ್ನು ಎಷ್ಟೋ ದುರ್ನಡತೆಯಿಂದ ಪಾರುಮಾಡುತ್ತದೆ. ಶ್ರೀಮಾತೆಯವರು

ಹೇಳುತ್ತಿದ್ದರು: 'ಯಾರಲ್ಲಿ ಭಯವಿರುತ್ತದೋ ಅವರಿಗೇ ಜಯ' ಎಂದು. ಇಲ್ಲಿ ಭಯವೆಂದರೆ ದುರ್ನಡತೆಯ ವಿಷಯದಲ್ಲಿರುವ ಸಂಕೋಚ ಅಥವಾ ಲಜ್ಜೆ. ಈ ಲಜ್ಜೆಯನ್ನು ಅಂತಃಸಾಕ್ಷಿ (*inner conscience*) ಎಂದೂ ಕರೆಯಬಹುದು. ಈ ಲಜ್ಜೆ ಹೋಯಿತೆಂದರೆ ವ್ಯಕ್ತಿಯು ಯಾವುದಕ್ಕೂ ಹೇಸುವುದಿಲ್ಲ. ಅವನಿಗೆ ಅವಮಾನವೆಂಬುದೇ ಇಲ್ಲವಾಗುತ್ತದೆ. ಇದು ನೈತಿಕ ಮತ್ತು ಆಧ್ಯಾತ್ಮಿಕ ಸಾವು. ಆದ್ದರಿಂದ ನಮ್ಮ ನಡೆನುಡಿಯಲ್ಲಿ ಗಾಂಭೀರ್ಯ, ಲಜ್ಜಾಸ್ವಭಾವ ಇದ್ದರೆ ಅದು ನಮ್ಮನ್ನು ನೈತಿಕ ಅವನತಿಯಿಂದ ಪಾರು ಮಾಡುತ್ತದೆ.

## ಲಜ್ಜೆಯೇ ಭೂಷಣ

**ಒಮ್ಮೆ ಉದ್ಬೋಧನದಲ್ಲಿ ರಾಧಿ (ಅವರ ತಮ್ಮನ ಮಗಳು)** ಗೆಜ್ಜೆಯನ್ನು ಧರಿಸಿ ಮಹಡಿ ಮೆಟ್ಟಿಲಿನಿಂದ ಸರಸರನೆ ಇಳಿದು ಬರುತ್ತಿದ್ದಳು. ಆಗ ಶ್ರೀಮಾತೆಯವರು ಆಕೆಯನ್ನು ಗಟ್ಟಿಯಾಗಿ ಗದರಿಸಿ, 'ರಾಧಿ ಏನು ಮಾಡುತ್ತಿರುವೆ? ಕೆಳಗೆ ನನ್ನ ಮಕ್ಕಳು ದೇವರ ಧ್ಯಾನ ಮಾಡುತ್ತಿದ್ದಾರೆ. ನೀನು ಇಷ್ಟೊಂದು ಶಬ್ದ ಮಾಡುತ್ತಿದ್ದೀಯ. ಇದರಿಂದ ಅವರಿಗೆ ತೊಂದರೆಯಾಗುವುದಿಲ್ಲವೇ' ಎಂದರು. ಒಮ್ಮೆ ರಾಧಿ ತೊಟ್ಟ ಬಟ್ಟೆಯನ್ನು ಮೊಣಕಾಲ ಮೇಲಕ್ಕೆ ಎಳೆದಳು. ಆಗ ಶ್ರೀಮಾತೆಯವರು 'ಅಹಾ! ಸ್ತ್ರೀಯರು ಮೊಣಕಾಲ ಮೇಲಕ್ಕೆ ಬಟ್ಟೆ ಧರಿಸಿದರೆ ನಗ್ನರೆಂದೇ ಹೇಳಬೇಕು' ಎಂದರು. ಸ್ತ್ರೀಗೆ ಲಜ್ಜೆಯೇ ಭೂಷಣ ಎನ್ನುತ್ತಿದ್ದರು. ವ್ರೀಡಾ ಚೇತ್ ಕಿಮು **ಭೂಷಣೈಃ** —'ಲಜ್ಜೆಯಿದ್ದರೆ ಆಭರಣದ ಆವಶ್ಯಕತೆಯೇನು?' ಎನ್ನುತ್ತಾನೆ ಭರ್ತೃಹರಿ.

ಸ್ತ್ರೀಯರು ಸದಾ ಸರಳರಾಗಿ, ಲಜ್ಜಾವತಿಯರಾಗಿರ ಬೇಕೆಂದೇ ಶ್ರೀಮಾತೆಯವರ ಆದೇಶ. ಇಂತಹ ಲಜ್ಜಾಪಟಾವೃತೆ ಯಾದ ಶ್ರೀಮಾತೆಯವರು ಸದಾ ನಮ್ಮನ್ನು ಅದೇ ಮಾರ್ಗದಲ್ಲಿ ಕರೆದುಕೊಂಡು ಹೋಗಲಿ ಎಂದು ಪ್ರಾರ್ಥಿಸೋಣ. ಇಂದಿನ ನವ ಯುಗದ ಸ್ತ್ರೀಯರಿಗೆ ಶ್ರೀಮಾತೆಯವರ ಸಂದೇಶ ಅತ್ಯವಶ್ಯಕವಾಗಿ ಬೇಕಾಗಿದೆ—ಸಮಾಜದಲ್ಲಿ ಶಾಂತಿ ಮತ್ತು ಪರಿಶುದ್ಧತೆಯನ್ನು ಕಾಪಾಡಿಕೊಂಡು ಬರಲು.

---

# ಪ್ರಹಸನ ಪ್ರಸಂಗ

ನಮ್ಮ ದಿನ ನಿತ್ಯದ ವ್ಯವಹಾರಗಳಲ್ಲಿ, ನಮ್ಮ ಅತ್ಯಾತುರ ಸ್ಫೂರ್ತಿಯಲ್ಲಿ ನಾವು ನಿರಂತರ ಧಾವಿಸುತ್ತಿದ್ದೇವೆ—ಸ್ವಲ್ಪವೂ ವಿರಾಮವೇ ಇಲ್ಲ. ಆಗಾಗ ನಿಂತು ನಾವೇನು ಮಾಡುತ್ತಿದ್ದೇವೆ, ಎಲ್ಲಿಗೆ ಹೋಗುತ್ತಿದ್ದೇವೆ, ನಮ್ಮ ಜೀವನದ ಆದರ್ಶವೇನು ಎಂಬುದನ್ನು ಚಿಂತಿಸುವುದು ಅವಶ್ಯಕ. ಜೀವನದಲ್ಲಿ ಓಡುವುದು ಮಾತ್ರವಲ್ಲದೆ ನಿಲ್ಲುವುದನ್ನೂ ಕಲಿಯಬೇಕು.

ಒಬ್ಬ ಕುದುರೆ ಸವಾರನು ಒಂದು ಹೊಸ ಕುದುರೆಯನ್ನು ಕೊಂಡುಕೊಳ್ಳಲು ಮಾರುಕಟ್ಟೆಗೆ ಹೋದನು. ಒಂದು ದಷ್ಟ ಪುಷ್ಟವಾದ, ಚುರುಕಾದ ಕುದುರೆಯನ್ನು ಆರಿಸಿದನು. ಕುದುರೆ ಮಾರುವವನು ಅದರ ವೈಶಿಷ್ಟ್ಯವನ್ನು ವಿವರಿಸುತ್ತಾ ಹೇಳಿದನು: 'ಇದೊಂದು ವಿಶೇಷ ಕುದುರೆ. "*O my God*" (ಓ ನನ್ನ ದೇವರೆ) ಎಂದರೆ ಮಾತ್ರ ಇದು ಮುಂದೆ ಓಡುತ್ತದೆ. ಇಲ್ಲವಿದ್ದರೆ ನಿಂತಲ್ಲಿಂದ ಕದಲುವುದೇ ಇಲ್ಲ. ಹಾಗೆಯೇ ನಿಲ್ಲಿಸಬೇಕಾದರೂ ಸುಮ್ಮನೆ ಕಡಿವಾಣವನ್ನು ಎಳೆದರೆ ನಿಲ್ಲುವುದಿಲ್ಲ. "*Amen*" (ಆಮೆನ್) ಎಂದರೆ ಮಾತ್ರ ನಿಲ್ಲುತ್ತದೆ.' ಕುದುರೆ ಸವಾರನು, ತನಗೆ ಕುದುರೆಗಳ ವಿಷಯದಲ್ಲಿ ಚೆನ್ನಾಗಿ ಅನುಭವವಿದೆ, ಕುದುರೆಯನ್ನು ನಡೆಸುವುದು ಹೇಗೆಂಬುದು ತನಗೆ ಗೊತ್ತು ಎಂದು ಹೆಮ್ಮೆಯಿಂದ ಹೇಳಿ ಅದನ್ನು ಕೊಂಡುಕೊಂಡು ಹೋದನು.

ಕುದುರೆಯ ಮೇಲೆ ಹತ್ತಿ ಕುಳಿತುಕೊಂಡು ತನ್ನದೇ ರೀತಿಯಲ್ಲಿ ಅದನ್ನು ಓಡಿಸಲು ಪ್ರಯತ್ನಿಸಿದ. ಅದು ಕದಲಲಿಲ್ಲ. ಕಾಲಿನಿಂದ ಒದ್ದನು, ಕಡಿವಾಣವನ್ನು ಜಗ್ಗಿದ, ಜೋರಾಗಿ ಕೂಗಿದ, ಛಾವಟಿಯಿಂದ ಹೊಡೆದ. ಏನೇ ಮಾಡಿದರೂ ಅದು ಕದಲಲೇ ಇಲ್ಲ. ಕೊನೆಗೆ ಬಹಳ ಜೋರಾಗಿ ಮನಸ್ಸಿಗೆ ಬಂದಂತೆ ಅದನ್ನು ಹೊಡೆಯ ತೊಡಗಿದ.

ಈಗ ಕುದುರೆ ಕೋಪದಿಂದ ಓಡತೊಡಗಿತು. ನಾಗಾಲೋಟದಿಂದ ಎಲ್ಲೆಂದರಲ್ಲಿ ಮನಬಂದಂತೆ ಓಡುತ್ತಿದೆ. ಇವನಿಗೆ ಅದನ್ನು ಹೇಗೆ ನಿಗ್ರಹಿಸಬೇಕೆಂದು ತಿಳಿಯಲಿಲ್ಲ. ಈಗ ಅದು ಪರ್ವತದ ತಪ್ಪಲಿನಲ್ಲಿ ಬಹಳ ವೇಗದಿಂದ ಓಡುತ್ತಿದೆ. ಅದನ್ನು ನಿಲ್ಲಿಸುವ ವಿಧಾನ ಅವನಿಗೆ ಮರೆತೇ ಹೋಯಿತು. ಕುದುರೆಯು ಓಡುತ್ತ ಒಂದು ಭಾರಿ ಪ್ರಪಾತದ ಸಮೀಪ ಬಂತು. ಇನ್ನೇನು ಅದು ಪ್ರಪಾತದಲ್ಲಿ ಧುಮುಕಬೇಕು—ಧುಮುಕಿದರೆ ಇಬ್ಬರಿಗೂ ಸಾವು ನಿಶ್ಚಯ— ಆಗ ಅವನಿಗೆ ನೆನಪಾಯಿತು. '*Amen*' (ಆಮೆನ್) ಎಂದು ಉಚ್ಚರಿಸಿದನು. ಕುದುರೆ ತಕ್ಷಣ ನಿಂತಿತು. ಒಂದು ಹೆಜ್ಜೆ ಮುಂದೆ ಹೋಗಿದ್ದರೆ ಮೃತ್ಯುವಿನ ಬಾಯಿಗೆ ಬೀಳಬೇಕಾಗಿತ್ತು. ಸವಾರನು ಆ ಪ್ರಪಾತದ ಕಡೆ ಒಮ್ಮೆ ದೃಷ್ಟಿಸಿ ನೋಡಿದ. ಅದೊಂದು ಭಯಂಕರ ದೃಶ್ಯ. ಅವನು ಎದೆಯ ಮೇಲೆ ಕೈಯಿಟ್ಟು, '*O my God!*' ಎಂದು ಉದ್ಗರಿಸಿದ.

ನಮಗೆ ವಿಷಯಸುಖದಲ್ಲಿ ತೀವ್ರ ಆಸಕ್ತಿ. ಅದರ ದುಷ್ಪರಿಣಾಮಗಳ ಅರಿವಿದ್ದರೂ ಅವುಗಳಿಂದ ವಿಮುಖರಾಗುವುದಿಲ್ಲ. ಕಣ್ಣಿದ್ದರೂ ಕುರುಡರಂತೆ ವರ್ತಿಸುತ್ತೇವೆ.

ಬೀದಿಯ ಬದಿಯಲ್ಲಿ ಕುರುಡನೊಬ್ಬನು ಭಿಕ್ಷೆ ಬೇಡುತ್ತ ಕುಳಿತಿದ್ದನು. ತುಂಬ ಆರ್ತಸ್ವರದಲ್ಲಿ ದಾರಿಯಲ್ಲಿ ಹೋಗುವವರನ್ನೆಲ್ಲ ಅಂಗಲಾಚಿ ಬೇಡುತ್ತಿದ್ದನು. ದಾರಿಹೋಕನೊಬ್ಬನು ದೂರದಿಂದಲೇ ಒಂದು ನಾಣ್ಯವನ್ನು ಅವನ ಕಡೆ ಎಸೆದನು. ಅದು ಅವನ ಮೈಗೆ ತಾಗಿ ನೆಲದ ಮೇಲೆ ಬಿತ್ತು. ಕೂಡಲೆ ಭಿಕ್ಷುಕನು ಅದನ್ನು ಎತ್ತಿಕೊಂಡನು. ಈಗ ದಾರಿಹೋಕನಿಗೆ ಸಂದೇಹ ಉಂಟಾಗಿ ಅವನನ್ನು 'ನೀನು ಕುರುಡ. ನಿನಗೆ ಹೇಗೆ ನಾಣ್ಯ ಕಾಣಿಸಿತು? ಅದನ್ನು ಹೇಗೆ ಎತ್ತಿ ಕೊಂಡೆ?' ಎಂದನು.

'ನಿಜ ಹೇಳಬೇಕೆಂದರೆ ನಾನು ಕುರುಡನಲ್ಲ. ಈ ಸ್ಥಳದಲ್ಲಿ ಇನ್ನೊಬ್ಬ ಕುರುಡ ಕುಳಿತುಕೊಳ್ಳುತ್ತಿದ್ದ. ಅವನು ಇಂದು ಇಲ್ಲದಿರುವುದರಿಂದ ಅವನ ಜಾಗದಲ್ಲಿ ನಾನು ಕುರುಡನಂತೆ ನಟಿಸುತ್ತ ಕುಳಿತು ಕೊಂಡಿದ್ದೇನೆ ಅಷ್ಟೆ' ಎಂದನು ಆ ಭಿಕ್ಷುಕ.

'ಆ ಕುರುಡ ಎಲ್ಲಿಗೆ ಹೋಗಿದ್ದಾನೆ?'

'ಸಿನಿಮಾ ನೋಡುವುದಕ್ಕೆ.'